
ಹೇಳಿ, ಸ್ಕೂಲಿನ ಪಕ್ಕದ ಅಂಗಡೀಲಿ ಸಾಲ ಮಾಡಿದ್ರೆ ಅದಕ್ಕೆ ಬೀದಿ ರಂಪ ಮಾಡೋದಾ? ಅಪ್ಪ ತಾನೇ? ತಿನ್ನಲಿ ಅಂತ ಯಾಕೆ ಅಂದ್ಕೊಳಲಿಲ್ಲ? ಅದಕ್ಕೇ ನಿನ್ನ ಮದುವೆ ಮುರಿದಿದೀನಿ. ಇನ್ನು ನೀನು ನಿಮ್ಮಮ್ಮನೂ ಒಟ್ಟಿಗೆ ನೇತಾಕೊಳ್ಳಿ' ಅಂದು ಹೊರಟುಹೋದರಂತೆ.



ಒಂದು ದಿನ ಕೋಕಿಲ ಒಬ್ಬಳೇ ತವರಿಗೆ ಬಂದಳು. ಮೊದಲಿಗೆ ಸುನಂದಮ್ಮ 'ಬಾಗಿಲ ಹೊಸ್ತಿಲು ತುಳೀಬೇಡ. ಯಾರನ್ನೋ ಕಟ್ಟಿಕೊಂಡು ಓಡಿಹೋಗಿ ಮನೆಯ ಮಾನ ಕಳೆದಿದ್ದೀಯಾ' ಅಂತ ಬಾಗಿಲಲ್ಲೇ ನಿಲ್ಲಿಸಿಕೊಂಡು ಬೈದಾಡಿದಳು. ಆದರೆ ಶಾರದಾ ಟೀಚರ್ ತಂಗಿಯ ಪರ ವಹಿಸಿ, 'ಹಾಗೆ ಗುಟ್ಟಾಗಿ ಮಾಡಿಕೊಂಡು ಹೋಗದಿದ್ದಿದ್ದರೆ ಇವಳಿಗೆ ಮದುವೆಯೇ ಆಗ್ತಿರಲಿಲ್ಲ. ಆ ಕೊಲೆಗಾರ ವೆಂಕಟನೂ, ಅವನ ಕಡೆಯವರೂ ಇವಳು ಬೇರೆಯೊಬ್ಬರನ್ನ ಮದುವೆ ಆಗಲು ಬಿಡ್ತಿರಲಿಲ್ಲ. ಮೊದಲು ಒಳಗೆ ಕೂರಿಸಿಕೊಂಡು ಮಾತನಾಡೋಣ ಯಾರಾದರೂ ನೋಡಿಯಾರು' ಅಂದು ಒಳಗೆ ಕೂರಿಸಿಕೊಂಡು, 'ನೀನ್ಯಾಕೆ ಬರೋಕ್ಕೆ ಹೋದೆ. ಈ ಏರಿಯಾ ಸರಿಯಿಲ್ಲ ಅಂತ ಗೊತ್ತಿಲ್ಲವ ನಿನಗೆ? ಈಗ ವೆಂಕಟ ಜೈಲಿನಿಂದ ಬೇಲಿನ ಮೇಲೆ ಹೊರ ಬಂದಿದಾನೆ. ನೀನು ಮನೆಬಿಟ್ಟು ಹೋಗಿದ್ದರಲ್ಲಿ ನಮ್ಮ ಪಾತ್ರ ಏನೂ ಇಲ್ಲ ಅಂತ ಇರಬೇಕು ನಮ್ಮನ್ನ ಏನೂ ಕೇಳೋಕ್ಕೆ ಬಂದಿಲ್ಲ. ಆದರೆ ನಿನ್ನನ್ನ ನೋಡಿದರೆ ಸುಮ್ಮನೆ ಬಿಡೋಲ್ಲ. ಸೈಕಲ್ ಶಾಪಿನಲ್ಲಿ ಯಾರಿದ್ರು ಬರುವಾಗ? ಯಾರಾದ್ರೂ ನೋಡಿದ್ರಾ?' ಅಂತ ವಿಚಾರಿಸಿದಳಂತೆ. 'ನಾನು ಹಿಂದಿನ ಬೀದಿಯಿಂದ ಬಳಸಿಕೊಂಡು ಬಂದೆ ಅಕ್ಕ. ಈಗ ಯಾರೂ ನೋಡಲಿಲ್ಲ. ಆದರೆ ವೆಂಕಟ ಜೈಲಿನಿಂದ ಬಂದಾಗಲೇ ಎಲ್ಲ ಕಡೆ ಹುಡುಕಿಸಿ, ನಾನಿರೋ ಅರಸೀಕೆರೆ ಮನೇನ ಪತ್ತೆ ಮಾಡಿಬಿಟ್ಟ. 'ಗಂಡಾ ಮಗೂನ ಬಿಟ್ಟು ನನ್ನ ಜೊತೆಗೆ ಬಂದುಬಿಡು' ಅಂತ ದಿನವೂ ಹಿಂಸೆ ಮಾಡ್ತಿದ್ದಾನೆ. 'ನೀನು ಬರೋದಕ್ಕೆ ಒಪ್ಪದೇ ಹೋದ್ರೆ ನಿನ್ನ ಗಂಡನ್ನ ಕೊಂದು ನಿನ್ನ ಕರ್ಕೊಂಡು ಹೋಗ್ತೀನಿ ಅಂತ ಬೆದರಿಸ್ತಾನೆ' ಅಂತ ಗೋಳೋ ಅಂತ ಅತ್ತಳಂತೆ. ಏನು ಮಾಡುವುದೆಂದು ಬಹಳ ಯೋಚಿಸಿ, ಭಯದಲ್ಲೇ ಅಕ್ಕತಂಗಿಯರಿಬ್ಬರೂ ಹೋಗಿ ಪೊಲೀಸ್ ಸ್ಟೇಷನ್ನಿನಲ್ಲಿ ದೂರು ಕೊಟ್ಟು ಬಂದರಂತೆ. ಅಷ್ಟಾದ ಮೇಲೆ ಕೋಕಿಲ ತನ್ನ ಗಂಡನ ಮನೆಗೆ ಹಿಂದಿರುಗಿಬಿಟ್ಟಳು. ಪೊಲೀಸರು ವೆಂಕಟನನ್ನು ಕರೆದು ವಿಚಾರಿಸಿ, ಎಚ್ಚರಿಸಿ ಕಳಿಸಿದ್ದಾರೆ. ಅವನು ನೇರ ಶಾರದಾ ಟೀಚರ್ ಮನೆ ಬಾಗಿಲಿಗೆ ಹೋಗಿ, 'ನನ್ನ ಮೇಲೇ ಕಂಪ್ಲೈಂಟ್ ಕೊಡೋ ಅಷ್ಟು ಧೈರ್ಯವಾ ನಿನಗೆ? ನೋಡ್ಕೋತೀನಿ' ಎಂದು ಬಂದಿದ್ದಾನೆ.

ಶಾರಾದಾ ಟೀಚರ್ ಯಾರ ತಂಟೆಗೂ ಹೋಗುವ ಸ್ವಭಾವದವರಲ್ಲ. ಆದರೀಗ ವೆಂಕಟನಂತ ರೌಡಿಯನ್ನು ಎದುರು ಹಾಕಿಕೊಂಡಂತೆ ಆಯಿತು. ಅವನೇನು ಮಾಡಿಬಿಡ್ತಾನೋ ಎನ್ನುವ ಭಯದಲ್ಲೇ ಇರ್ತಾ ಇದ್ದರು. ಈಗ ಮೊದಲಿನಂತೆ ಪರಮೇಶ್ವರಪ್ಪನವರ ಜೊತೆ ಕೂಡಾ ಇರಲಿಲ್ಲ. ಅವರಿಗೆ ಬೇರೊಬ್ಬ ಹೆಣ್ಣಿನೊಂದಿಗೆ ಮದುವೆ ಗೊತ್ತಾಗಿತ್ತು. ಅಷ್ಟು ಕಾಲ ಪ್ರೀತಿಸಿ, ಈಗ ತನ್ನ ಸಂಗಾತಿಗೆ ಇನ್ನೊಂದು ಹೆಣ್ಣಿನ ಜೊತೆಗೆ ಮದುವೆ ಆಗುತ್ತಿದೆ ಎಂದರೆ ಟೀಚರ್ ಪಾಪ ಯಾವ ರೀತಿಯ ಭಾವನಾತ್ಮಕ ಹೊಯ್ದಾಟವನ್ನು ಅನುಭವಿಸುತ್ತಾ ಇರಬಹುದು. ಅದರಲ್ಲಿ ಈ ಕಿಡಿಗೇಡಿಯ ಭಯ ಬೇರೆ ಸೇರಿಕೊಂಡಿತು. ಈ ವೆಂಕಟ ಜೈಲಿನಿಂದ ಬರುತ್ತಾ ಕೆಲವು ಹೊಸ ಪರಿಚಯಗಳನ್ನ ಮಾಡಿಕೊಂಡು ಬಂದಿದ್ದನಲ್ಲ. ಅದರಲ್ಲಿ ಯಾರೋ ಒಬ್ಬ ಸೆಕ್ಸ್ ವಿಡಿಯೋಗಳನ್ನ ಮಾಡುತ್ತಿದ್ದವನು. ವೆಂಕಟ ಅವನ ಮೂಲಕ ಶಾರದಾ ಟೀಚರಿನ ಫೋಟೊವನ್ನು ಯಾವುದೋ ಬೆತ್ತಲೆ ಮೈಯಿಯೊಂದಿಗೆ ಎಡಿಟ್ ಮಾಡಿಸಿ ಅದಕ್ಕೊಂದು ಕಾಮದ ಕಥೆಯನ್ನು ಅಂಟುಹಾಕಲು ಸೂಚನೆ ಕೊಟ್ಟ. ಅಷ್ಟು ಮಾತ್ರವಲ್ಲದೆ ಆ ವಿಡಿಯೋಗಳನ್ನು ಶಾರದಾ ಟೀಚರಿನ ಆಪ್ತ ವಲಯಗಳಿಗೆ ಹರಿಬಿಟ್ಟ. ವಿದ್ಯಾರ್ಥಿಗಳು, ಪೋಷಕರು, ಸಹ ಶಿಕ್ಷಕರು, ನೆರೆಹೊರೆಯವರು,